Davanagere	9	Kerebilachi	50
Dharwad	10	Hubli	250
	11	Hubli	100
Gadag	12	Gadag	50
Gulbarga	13	Jevargi	100
Hassan	14	Hassan	50
Kolar	15	Kolar	50
Koppal	16	Koppal	50
	17	Yalaburga	50
Mysore	18	Mysore	50
Raichur	19	Raichur	50
	20	Manvi 50	50
Shimoga	21	Shimoga	250
Uttar Kannada	22	Dandeli	50
		Total	1150

1308(1269) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತಿನ ನಿಬಂಧಕರನ್ನು ಯಾರು ನೇಮಿಸುತ್ತಾರೆ ಮತ್ತು ಅವರು ಯಾವ ಅವಧಿಗೆ ಹುದ್ದೆಯನ್ನು ಹೊಂದಬಹುದು;

ಆ) ಶುಶ್ರೂಷ ಶಿಕ್ಷಣದಲ್ಲಿ ಶುಶ್ರೂಷ ಪರಿಷತ್ತಿನ ಪಾತ್ರವೇನು ಮತ್ತು ಶುಶ್ರೂಷ ಪರಿಷತ್ತನ್ನು ಯಾರು ನಿಯಂತ್ರಿಸುತ್ತಾರೆ?

ಡಾ॥ ಎ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತಿನ ಬೈಲಾದಲ್ಲಿನ ನಿಯಮಗಳಂತೆ ಪರಿಷತ್ತು ನಿಬಂಧಕರನ್ನು ನೇಮಿಸುವುದು ಮತ್ತು ಪರಿಷತ್ತು ಕೆ.ಸಿ.ಎಸ್.ಆರ್.ನ್ನು ಅಳವಡಿಸಿಕೊಂಡಿರುವುದರಿಂದ ವಯೋ ನಿವೃತ್ತಿಯವರೆವಿಗೆ ನಿಬಂಧಕರ ಅವಧಿ ಇರುತ್ತದೆ.

ಆ) 1) ಶುಶ್ರೂಷಕರ, ಮಿಡ್‌ವೈಫ್ ಮತ್ತು ಆರೋಗ್ಯ ಸಹಾಯಕಿಯರ ಹೆಸರುಗಳನ್ನು ನೊಂದಾಯಿಸುವುದು.

2) ಡಿಪ್ಲೋಮ ಮತ್ತು ಸ್ಪೆಷ್ಯಾಲಿಟಿ ಡಿಪ್ಲೋಮ ನರ್ಸಿಂಗ್‌ಗೆ ಪಠ್ಯಕ್ರಮವನ್ನು ನಿಗದಿಪಡಿಸುವುದು.

3) ನರ್ಸಿಂಗ್ ಸಂಸ್ಥೆಗಳಿಗೆ ಮಾನ್ಯತೆ ನೀಡುವುದು, ನರ್ಸಿಂಗ್ ಸಂಸ್ಥೆಗಳಲ್ಲಿ ಲಭ್ಯವಿರುವ ಮೂಲಭೂತ ಮತ್ತು ಕ್ಲಿನಿಕಲ್ ಸೌಕರ್ಯಗಳ ಬಗ್ಗೆ ಕಾಲಕಾಲಕ್ಕೆ ಪರಿವೀಕ್ಷಣೆ ಮಾಡುವುದು.

4) ಶುಶ್ರೂಷಕರ ತರಬೇತಿ ಕಾರ್ಯಕ್ರಮವನ್ನು ನಿಯಂತ್ರಿಸುವುದು.

5) ಅರ್ಹ ನರ್ಸಿಂಗ್ ವಿದ್ಯಾರ್ಥಿಗಳಿಗೆ ನರ್ಸಿಂಗ್ ವೃತ್ತಿಯನ್ನು ಮಾಡಲು ನೋಂದಣಿ ಪ್ರಮಾಣ ಪತ್ರವನ್ನು ನೀಡುವುದು.

6) ಬೇರೆ ರಾಜ್ಯ ಮತ್ತು ರಾಷ್ಟ್ರಗಳ ನರ್ಸಿಂಗ್ ನೊಂದಣಿ ಪ್ರಮಾಣ ಪತ್ರವನ್ನು ತಪಾಸಣೆ ಮಾಡುವುದು.

7) ರಾಜ್ಯದ ನೊಂದಾಯಿತ ವೃತ್ತಿನಿರತ ಶುಶ್ರೂಷಕರ ಸಾಮಾನ್ಯ ತಪಾಸಣೆ.

ಕರ್ನಾಟಕ ನರ್ಸಸ್ ಮಿಡ್‌ವೈವ್ಸ್ ಮತ್ತು ಹೆಲ್ತ್ ವಿಸಿಟರ್ಸ್ ಅಧಿನಿಯಮ 1961ರಡಿ ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು ರಚಿಸಲಾಗಿದ್ದು, ಶಾಸನಬದ್ಧ ಸಂಸ್ಥೆಯಾಗಿರುತ್ತದೆ.

1309(1540) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಿ.ಇ.ಟಿ.ಯಲ್ಲಿ ವೈದ್ಯಕೀಯ ಕೋರ್ಸಿಗಾಗಿ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳಿಗೆ ಪ್ರಸ್ತುತ ಮೀಸಲಿರುವ ಒಂದು ಸೀಟನ್ನು ಎರಡು ಸೀಟುಗಳಿಗೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದಲ್ಲಿದೆಯೆ;

ಆ) ದಂತ ವೈದ್ಯದಲ್ಲಿ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳಿಗೆ ಯಾವುದಾದರು ಮೀಸಲಾತಿ ಇದೆಯೆ; ಇಲ್ಲದಿದ್ದಲ್ಲಿ ಸರ್ಕಾರದಿಂದ ಯಾವುದಾದರೂ ಪ್ರಸ್ತಾವನೆ ಇದೆಯೇ;

ಇ) ಬಿ.ಎಸ್ಸಿ. ನರ್ಸಿಂಗ್ ಮತ್ತು ಜನರಲ್ ನರ್ಸಿಂಗ್ ಸೀಟುಗಳಲ್ಲಿ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳಿಗೆ ಮಿಸಲಾತಿ ಇದೆಯೆ; ಇಲ್ಲದಿದ್ದಲ್ಲಿ, ಈ ಸೌಲಭ್ಯವನ್ನು ನೀಡುವುದಕ್ಕೆ ಯಾವುದಾದರು ಪ್ರಸ್ತಾವನೆ ಇದೆಯೇ;

ಈ) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ಐ.ಐ.ಎಂ ನಿಂದ ಮಾನ್ಯತೆ ಪಡೆದ ಕರ್ನಾಟಕದಲ್ಲಿನ ವೈದ್ಯಕೀಯ ಕಾಲೇಜುಗಳೆಷ್ಟು ಕಾಲೇಜುಗಳ ಹೆಸರು ಮತ್ತು ವಿಳಾಸದ ವಿವರಗಳನ್ನು ಒದಗಿಸುವುದು;

ಉ) ವಿವಿಧ ವರ್ಗಗಳ ಅಡಿಯಲ್ಲಿ ಲಭ್ಯವಿರುವ ಸ್ನಾತಕೋತ್ತರ ಸೀಟುಗಳ ಸಂಖ್ಯೆ ಎಷ್ಟು;